ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 81/2023

ಫಿರ್ಯಾದಿ ಆರೋಪಿ

ಓಂಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ವಿರುದ್ಧ ಅಮೃತ ರವಿ ಶೇಟ್
ಶಾಖೆ ಕುಮಟಾ.

ಆರೋಪಿಃ

ಅಮೃತ ರವಿ ಶೇಟ್ ,
35 ವರ್ಷ, ಉ: ಚಿನಿವಾರಿಕೆ ಕಸುಬು , ಸಾಃ ನೆಲ್ಲಿಕೇರಿ,
ತಾಃ ಕುಮಟಾ ಮತ್ತು ಸಾಃ ಹೆಬ್ಬಾರ್ನಕೆರೆ, ಪೊಃ ಕಲ್ಲೆ, ತಾಃ ಹೊನ್ನಾವರ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ದಿಃ 31-03-2020 ರಂದು ಫಿರ್ಯಾದುದಾರ ಸಹಕಾರಿಯಿಂದ ವೈಯಕ್ತಿಕ ಸಾಲ ರೂ. 2,00,000/-ಗಳನ್ನು ಸಾಲವನ್ನು ಪಡೆದಿದ್ದು, ಸದರಿ ಸಾಲವು ಕಟಬಾಕಿಯಾಗಿದ್ದರಿಂದ ಅದರ ತಿರುವಳಿಯ ಸಲುವಾಗಿ ನೀವು ದಿಃ 24-11-2021 ರಂದು ಫಿರ್ಯಾದುದಾರ ಸಹಕಾರಿಗೆ ಕರ್ನಾಟಕ ಬ್ಯಾಂಕ್ , ಕುಮಟಾ ಶಾಖೆಯ ಚೆಕ್ ನಂ. 080831 ನೇದನ್ನು ರೂ. 12,23,300/-ಕ್ಕೆ ಚೆಕ್ ನ್ನು ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಬ್ಯಾಂಕರರಿಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 24-12-2021 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು , ಸದ್ರಿ ನೋಟಿಸು ನಿಮಗೆ ದಿಃ 27-12-2021 ರಂದು ಜಾರಿಯಾಗಿದ್ದರೂ ಸಹ ನೀವು ಸದ್ರಿ ಚೆಕ್‌ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 23-02-2024.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ